**ದಿಃ 23-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

**ಪಾಟೀ ಸವಾಲುಃ**

(ಪ್ರತಿವಾದಿ ನಂ 1 ರಿಂದ 13 ಹಾಗೂ ಅವರ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ನಂ 14 ರ ಪರ ಶ್ರೀ ಎನ್ ಎಚ್ ಪಿ ವಕೀಲರಿಂದಃ**

ನನಗೆ ಈಗ 72 ವರ್ಷ ವಯಸ್ಸು. ನಾನು ಹಟಕಿನಾಳ ಗ್ರಾಮದಲ್ಲಿ ವಾಸವಾಗಿದ್ದೇನೆ. ನನಗೆ ದೇವೆಂದ್ರಪ್ಪ ಪಟ್ಟಣಶೆಟ್ಟಿ ಹಾಗೂ ವಸಂತರಾವ್ ಪಟ್ಟಣಶೆಟ್ಟಿರವರ ಪರಿಚಯ ಇದೆ. ನನಗೆ ಪಕ್ಕಾ ಓದಲು ಬರೆಯಲು ಬರುವುದಿಲ್ಲ. ದಾವೆಯನ್ನು ಶಂಕ್ರಪ್ಪ ಹಿರೇಮಠ ಇವರು ಸಲ್ಲಿಸಿದ್ದಾರೆ ಯಾರ ವಿರುದ್ಧ ಸಲ್ಲಿಸಿದ್ದಾರೆ ನನಗೆ ಗೊತ್ತಿಲ್ಲ. ಆಸ್ತಿ ಸಲುವಾಗಿ ದಾವೆ ಸಲ್ಲಿಸಿದ್ದಾರೆ. ದಾವಾ ಆಸ್ತಿಗಳ ಸರ್ವೆ ನಂಬರ, ಕ್ಷೇತ್ರ ಹೇಳಲು ಬರುವುದಿಲ್ಲ. ಯಾವ ಸರ್ವೆ ನಂಬರನಲ್ಲಿ ಯಾರು ಕಬ್ಜೆಯಲ್ಲಿ ಇದ್ದಾರೆ ಹೇಳಲು ಬರುವುದಿಲ್ಲ. ಸರ್ವೆ ನಂ 60 ಮತ್ತು 61 ರ ಜಮೀನುಗಳನ್ನು ಪ್ರತಿವಾದಿಯ ನಂ 14 ರವರ ತಂದೆ ಹಾಗೂ ಅವರ ಕಾಕಾ ಖರೀದಿಸಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. ಜಮೀನು ಖರೀದಿಸಿದಾಗಿನಿಂದ ಪಟ್ಟಣಶೆಟ್ಟಿರವರು ಕಬ್ಜಾದಲ್ಲಿ ಇದ್ದಾರೆ ಅಂದರೆ ನಿಜ. ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ**

(ಪ್ರತಿವಾದಿ ನಂ 15 (ಎ) ದಿಂದ (ಡಿ) ಪರ ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು ಸದರಿಯವರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.